O.S 116/2022

P.W.1

ಸಾಕ್ಷಿಯನ್ನು ದಿಃ 17-09-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಬಿ.ಎಸ್.ಪಿ. ವಾದಿ ಪರ ವಕೀಲರಿಂದ

ನಾನು ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ.

ವಿಶೇಷ ಮುಕ್ತಿಯಾರ ನಾಮೆಯನ್ನು ನಿಪಿ-1 ಎಂದು, ದಾವಾ ಆಸ್ತಿಯ ಪಹಣಿಯ ಗಣಕೀಕೃತ ಪತ್ರಿಕೆಯನ್ನು ನಿಪಿ-2 ಎಂದು, ಐದು ಕೈಬರಹ ಪಹಣಿಗಳ ದೃಡಿಕೃತ ನಕಲುಗಳನ್ನು ಕ್ರಮವಾಗಿ ನಿಪಿ3 ರಿಂದ 7 ಎಂದು, ಎಮ್ ಆರ್ ನಂ. 1234, 1574,1813 ರ ದೃಡಿಕೃತ ನಕಲನ್ನು ಕ್ರಮವಾಗಿ ನಿಪಿ-8 ರಿಂದ 10 ಎಂದು, ಎಮ್.ಆರ್ ನಂ. 39/2007-08 , ಎಚ್. 48/2014-15 ರ ಗಣಕೀಕೃತ ದೃಡಿಕೃತ ನಕಲನ್ನು ನಿಪಿ-11 ಮತ್ತು 12 ಎಂದು , ದಾವಾ ಆಸ್ತಿಗೆ ಕಚ್ಚಾ ನಕಾಶೆಯನ್ನು ನಿಪಿ-13 ಎಂದು, ಮೂರು ಕಾನೂನು ಸೂಚನಾ ಪತ್ರವನ್ನು ಕ್ರಮವಾಗಿ ನಿಪಿ -14 ರಿಂದ 16 ಎಂದು, ಮುಖ್ಯ ಕಾರ್ಯನಿರ್ವಾಹಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗದಗ ಇವರು ನೀಡಿರುವ ಪತ್ರಗಳು ಒಟ್ಟು 14 ಅವುಗಳನ್ನು ಕ್ರಮವಾಗಿ ನಿಪಿ17 ರಿಂದ 30 ಎಂದು, ಕಲಂ 18(1) ಸಿಪಿಸಿ ಅಡಿಯಲ್ಲಿ ನೀಡಿರುವ ಕಾನೂನು ಮೂರು ಸೂಚನಾ ಪತ್ರದ ಕಛೇರಿಯ ಪ್ರತಿಗಳನ್ನು ಕ್ರಮವಾಗಿ ನಿಪಿ31 ರಿಂದ 33 ಎಂದು, ಪಂಚಾಯತ ಕಾರ್ಯಾಲಯ ರಣತೂರ ರವರಿಗೆ ನೀಡಿರುವ ಮೂರು ಸೂಚನಾ ಪತ್ರಗಳನ್ನು ಕ್ರಮವಾಗಿ ನಿಪಿ-34 ರಿಂದ 36 ಎಂದು, ಐದು ಪ್ರತಿವಾದಿಗಳಿಗೆ ಬಿನ್ ಜಾರಿಯಾದ ಅಂಚೆ ಲಕೋಟೆಗಳು ಇದ್ದು ಅವುಗಳನ್ನು ಕ್ರಮವಾಗಿ ನಿಪಿ37 ರಿಂದ 41 ಎಂದು, 16 ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿಪಿ42 ರಿಂದ 57 ಎಂದು, ದಿಃ 29.06.2022 ರ ಜಿಲ್ಲಾಧಿಕಾರಿಗಳು ನೀಡಿದ ಪತ್ರವನ್ನು ನಿಪಿ58 ಎಂದು, ದಿಃ 07.08.2021 ಮತ್ತು 05.07.2024 ಮುಖ್ಯ ಕಾರ್ಯನಿರ್ವಾಧಿಕಾರಿಗಳು ನೀಡಿರುವ ಪತ್ರಗಳನ್ನು ಕ್ರಮವಾಗಿ ನಿಪಿ 59 ಮತ್ತು 60 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ

ಹಾಗೂ ಪ್ರ.ದ.ನ್ಯಾ.ದಂ. ಲಕ್ಷ್ಮೇಶ್ವರ